| | |
|---|---|
| Test Paper : **II**<br>Test Subject : **KANNADA**<br>Test Subject Code : **K-0217** | Test Booklet Serial No. : ________________<br>OMR Sheet No. : ________________<br>Roll No. ________________<br>(Figures as per admission card) |

**Name & Signature of Invigilator/s**

Signature : ________________________

Name : ________________________

**Paper : II**

**Subject : KANNADA**

Time : 1 Hour 15 Minutes | Maximum Marks : 100

Number of Pages in this Booklet : **8** | Number of Questions in this Booklet : **50**

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

### Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಕನ್ನಡ
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** 'ಪ್ರೇಮಾಲಯ ಸುತನ್ಗೆ' ಎನ್ನುವ ಮಾತು ಬಳಕೆಯಾಗಿರುವ ಶಾಸನ
(A) ಹಲ್ಮಿಡಿ ಶಾಸನ
(B) ಅತ್ತಿಮಬ್ಬೆಯ ಲಕ್ಕುಂಡಿ ಶಾಸನ
(C) ತಮಟಕಲ್ಲು ಶಾಸನ
(D) ಬಾದಾಮಿ ಶಾಸನ

**2.** ''ಲೋಕೋಪಕಾರಂ'' ಕೃತಿಯು ಇವರ ಆಶ್ರಯದಲ್ಲಿ ರಚಿತವಾಯಿತು
(A) ಚಾಲುಕ್ಯ ಜಯಸಿಂಹ
(B) ದುರ್ವಿನೀತ
(C) ಗಂಗರಾಚಮಲ್ಲ
(D) ಮುಮ್ಮಡಿ ಕೃಷ್ಣ

**3.** 'ಈಗಳಟೆದೆಂ ಸಿರಿಕಳ್ಳೊಡವುಟ್ಟಿತ್ತೆಂಬುದಂ' – ಈ ಉಕ್ತಿ ಬಂದಿರುವ ಕೃತಿ
(A) ಗದಾಯುದ್ಧ
(B) ಕುಮಾರವ್ಯಾಸ ಭಾರತ
(C) ಜೈಮಿನಿ ಭಾರತ
(D) ಪಂಪ ಭಾರತ

**4.** 'ಕುರುಳ್ಗಳ ಸವಣ' ಎಂಬ ಬಿರುದನ್ನು ಹೊಂದಿರುವ ಕವಿ
(A) ಒಂದನೆಯ ಗುಣವರ್ಮ
(B) ಪೊನ್ನ
(C) ರನ್ನ
(D) ನೇಮಿಚಂದ್ರ

**5.** ''ಕೆಂಡದ ಗಿರಿಯ ಮೇಲೊಂದು ಅರಗಿನ ಕಂಭವಿದ್ದಿತ್ತು ನೋಡಾ ಅಯ್ಯ'' ಎಂದು ಹೇಳಿದ ವಚನಕಾರ
(A) ಬಸವಣ್ಣ (B) ಸಿದ್ಧರಾಮ
(C) ಜೇಡರದಾಸಿಮಯ್ಯ (D) ಅಲ್ಲಮ ಪ್ರಭು

**6.** ಈ ಕೃತಿಯು ಭಾಮಿನಿಷಟ್ಪದಿಯಲ್ಲಿದೆ
(A) ಭಾಗವತ
(B) ಜೈಮಿನಿ ಭಾರತ
(C) ಶಿವತತ್ತ್ವ ಚಿಂತಾಮಣಿ
(D) ಸೋಮನಾಥ ಚರಿತ್ರೆ

**7.** ಇದು ಗದ್ಯಪ್ರಕಾರಕ್ಕೆ ಸೇರಿದ ಕೃತಿ
(A) ಹದಿಬದೆಯ ಧರ್ಮ
(B) ಮಿತ್ರಾವಿಂದಾ ಗೋವಿಂದ
(C) ಮುದ್ರಾಮಂಜೂಷ
(D) ಅಪ್ರತಿಮವೀರ ಚರಿತೆ

**8.** ''ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ....'' ಎಂಬ ಸಾಲುಗಳಿರುವ ಕೃತಿ
(A) ವಡ್ಡಾರಾಧನೆ
(B) ಸಮಯ ಪರೀಕ್ಷೆ
(C) ಧರ್ಮಾಮೃತ
(D) ಜೀವಸಂಬೋಧನೆ

**9.** ಕೆರೂರು ವಾಸುದೇವಾಚಾರ್ಯರ ಕೃತಿ
(A) ಇಂದಿರಾ ಬಾಯಿ
(B) ಇಂದಿರಾ
(C) ಸದ್ಧರ್ಮ ವಿಜಯ
(D) ಮುಸುಕು ತೆಗೆಯೆ ಮಾಯಾಂಗನೆ

**10.** 'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಸಂಶೋಧನಾ ಗ್ರಂಥದ ಲೇಖಕರು
(A) ಹಂಪನಾಗರಾಜಯ್ಯ
(B) ಎಂ. ಚಿದಾನಂದಮೂರ್ತಿ
(C) ಎಂ. ಎಂ. ಕಲಬುರ್ಗಿ
(D) ಆರ್. ನರಸಿಂಹಾಚಾರ್

**11.** ''ಐದಂಗುಲ ! ಐದು, ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ, ಐದು !'' – ಈ ಸಾಲುಗಳನ್ನು ಬರೆದ ಕವಿ
(A) ಎ. ಕೆ. ರಾಮಾನುಜನ್
(B) ಕೆ. ಎಸ್. ನಿಸಾರ್ ಅಹಮದ್
(C) ರಾಮಚಂದ್ರ ಶರ್ಮ
(D) ಶಾಂತರಸ

**12.** 'ಒಲುಮೆ' ಈ ಕೃತಿಯ ಕೃತಿಕಾರರು
(A) ಕುವೆಂಪು
(B) ತೀನಂಶ್ರೀ
(C) ತರಾಸು
(D) ಸಿದ್ದಯ್ಯ ಪುರಾಣಿಕ್

**13.** ಇವುಗಳಲ್ಲಿ ಶಬ್ದಾಲಂಕಾರ
(A) ದೀಪಕ (B) ರೂಪಕ
(C) ಉತ್ಪ್ರೇಕ್ಷೆ (D) ಅನುಪ್ರಾಸ

**14.** 'ಕಾವ್ಯ ಪ್ರಕಾಶ'ವನ್ನು ಕನ್ನಡಕ್ಕೆ ಅನುವಾದಿಸಿದವರು
(A) ಕೆ. ಕೃಷ್ಣಮೂರ್ತಿ
(B) ಬಸವಪ್ಪಶಾಸ್ತ್ರೀ
(C) ಎಸ್. ವಿ. ಪರಮೇಶ್ವರ ಭಟ್
(D) ಕೆ. ವಿ. ಸುಬ್ಬಣ್ಣ

**15.** 'Intuition' ತತ್ವದ ಮುಖ್ಯ ನೆಲೆಗಳು
(A) ವಾಸ್ತವ ಸತ್ಯವನ್ನು ಮರುಪರಿಶೀಲಿಸುವುದು
(B) ಕಾಲ ದೇಶಗಳಿಗೆ ಮೀರಿದುದನ್ನು ಗ್ರಹಿಸುವುದು
(C) ತೀವ್ರವಾದ ಕಲ್ಪನೆಗೆ ಸಂಬಂಧಿಸಿದ ಅಂಶ
(D) ವಾಸ್ತವ ಮತ್ತು ಅತಿವಾಸ್ತವಗಳನ್ನು ಜೋಡಿಸುವುದು

**16.** ಟಿ. ಎಸ್. ಎಲಿಯೆಟ್ ಪ್ರತಿಪಾದಿಸಿದ ಪರಿಕಲ್ಪನೆಯಲ್ಲಿ
(A) ವ್ಯಕ್ತಿ ಪ್ರತಿರೂಪಕ್ಕೂ ವ್ಯಕ್ತಿಯ ಭಾವನೆಗಳ ಉಕ್ತಿಗೂ ನೇರವಾದ ಸಂಬಂಧವಿದೆ
(B) ವಸ್ತು ಪ್ರತಿರೂಪಕ್ಕೂ ವ್ಯಕ್ತಿಯ ಭಾವನೆಗಳಿಗೂ ಅಪರೋಕ್ಷ ಸಂಬಂಧವಿದೆ
(C) ವಸ್ತು ಪ್ರತಿರೂಪದಿಂದ ವ್ಯಕ್ತಿತ್ವವು ಅಭಿವ್ಯಕ್ತಿಯಿಂದ ದೂರವಾಗುತ್ತದೆ
(D) ವಸ್ತು ಪ್ರತಿರೂಪವು ವ್ಯಕ್ತಿತ್ವದ ಸೃಷ್ಟಿಗೆ ದಾರಿಯಾಗುತ್ತದೆ

**17.** ಇವುಗಳಲ್ಲಿ ಇದು ಅರಿಸಮಾಸ
(A) ಕಡೆಗೋಲು (B) ಮಳೆಬೆಳೆ
(C) ಅರಸುಕುಮಾರ (D) ಕೆಂಗಣ್ಣು

**18.** ಪೂರ್ವದ ಹಳಗನ್ನಡದ ನಾಮವಿಭಕ್ತಿ ಪ್ರತ್ಯಯಗಳು
(A) ಆನ್ (B) ಒಳ್
(C) ಅರ್ (D) ಓನ್

**19.** ಮಹತ್ ಮತ್ತು ಅಮಹತ್ ಎಂಬ ಎರಡು ವರ್ಗಗಳನ್ನು ಕನ್ನಡದಲ್ಲಿ ಮುಖ್ಯವಾಗಿ ಎಲ್ಲಿ ಗುರುತಿಸಬಹುದು ?
(A) ಕಾಲ ಸೂಚಕಗಳಲ್ಲಿ
(B) ನಾಮಪದಗಳ ಲಿಂಗವ್ಯವಸ್ಥೆಯಲ್ಲಿ
(C) ಕ್ರಿಯಾವಿಶೇಷಣಗಳ ರಚನೆಯಲ್ಲಿ
(D) ನಾಮವಿಶೇಷಣಗಳ ರಚನೆಯಲ್ಲಿ

**20.** ಇವುಗಳಲ್ಲಿ ಯಾವ ಪದಗಳು ಅಚ್ಚಗನ್ನಡ ಪದಗಳು
(A) ಶ, ಷ ಕಾರಗಳಿಂದ ಕೂಡಿದ ಪದಗಳು
(B) ಜಿಹ್ವಾಮೂಲೀಯ ಘಟಿತ ಪದಗಳು
(C) ಋಕಾರ, ವಿಸರ್ಗಘಟಿತ ಪದಗಳು
(D) ಱ, ೞ ಘಟಿತ ಪದಗಳು

**ಬಹು ಆಯ್ಕೆಯ ಮಾದರಿ ಪ್ರಶ್ನೆಗಳು :**

**21.** ಇವು ಹಲ್ಮಿಡಿ ಶಾಸನದಲ್ಲಿ ಪ್ರಯೋಗವಾದ ಷಷ್ಠಿ ವಿಭಕ್ತಿಯುಳ್ಳ ಪ್ರಯೋಗಗಳು :
I. ಏಳನೆಯಾ
II. ಭಟರಿಯಾ
III. ಕಲಭೋರನಾ
IV. ಮಂಗಲೀಸನಾ
(A) II ಮತ್ತು III (B) II ಮತ್ತು IV
(C) I ಮತ್ತು II (D) III ಮತ್ತು IV

**22.** ಇವು ಪಂಪನ ಕಾವ್ಯದಲ್ಲಿ ಬರುವ ವಾಕ್ಯಗಳು
I. ಧರೆಗಮಾನೊಲಿದಂದು ನೆಗೞ್ತೆಮಾಸದೆ
II. ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್
III. ಪಿರಿಯಣ್ಣಂಗೆಱಗುವುದೇಂ ಪರಿಭವಮೇ
IV. ಕುಲಜಂ ಕುಲಹೀನನೆಂದು ಬಗೆಯದೆ ನೆಲಸುವೆ
(A) IV ಮತ್ತು I (B) I ಮತ್ತು III
(C) II ಮತ್ತು III (D) IV ಮತ್ತು III

**23.** ಇವು ಸಂಸ್ಕೃತದ ಆಕರವನ್ನು ಪಡೆದ ಕೃತಿಗಳು :
I. ಕರ್ನಾಟಕ ಕಾದಂಬರಿ ಮತ್ತು ಪಂಚತಂತ್ರಂ
II. ಬಸವರಾಜದೇವರ ರಗಳೆ ಮತ್ತು ತಿರುನೀಲಕಂಠ ದೇವರ ರಗಳೆ
III. ಕೆಳದಿ ನೃಪವಿಜಯ ಮತ್ತು ಕಂಠೀರವ ನರಸರಾಜ ವಿಜಯ
IV. ಆದಿಪುರಾಣ ಮತ್ತು ಯಶೋಧರ ಚರಿತೆ
(A) I ಮತ್ತು II (B) II ಮತ್ತು III
(C) I ಮತ್ತು IV (D) IV ಮತ್ತು III

**24.** ಇವು ಕನಕದಾಸರ ಕೃತಿಗಳಲ್ಲಿ ಕಾಣುವ ಪಾತ್ರಗಳು :
I. ಅನಿರುದ್ಧ, ಸೀತೆ
II. ದಮಯಂತಿ, ಅಕ್ಕಿ
III. ಬಾಣಾಸುರ, ಉಷೆ
IV. ರಾಗಿ, ಲಕ್ಷ್ಮಣ
(A) I ಮತ್ತು II (B) II ಮತ್ತು IV
(C) I ಮತ್ತು IV (D) II ಮತ್ತು III

**25.** ನಿಜಗುಣ ಶಿವಯೋಗಿಯವರ ಕೃತಿಗಳು :
I. ಅನುಭವಸಾರ
II. ಕೈವಲ್ಯ ಪದ್ಧತಿ
III. ವೀರಶೈವಾಮೃತ ಮಹಾಪುರಾಣ
IV. ಭಾವಚಿಂತಾರತ್ನ
(A) I ಮತ್ತು III (B) I ಮತ್ತು II
(C) II ಮತ್ತು IV (D) IV ಮತ್ತು III

**26.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ?
I. ಹೆಂಡತಿಯ ಹೆಸರು – ತ್ರಿವೇಣಿ
II. 0 – 0 = 0 – ತರಾಸು
III. ಕಮಲಾಪುರದ ಹೋಟಲಿನಲ್ಲಿ – ಅನಕೃ
IV. ಸಮಸ್ಯೆಯ ಮಗು – ವಾಣಿ
(A) I ಮತ್ತು II
(B) II ಮತ್ತು III
(C) III ಮತ್ತು IV
(D) IV ಮತ್ತು I

**27.** ಯಾವುದು ಸರಿಯಾದ ಹೊಂದಾಣಿಕೆ ?
I. ಬಸವಪ್ಪ ಶಾಸ್ತ್ರಿಗಳ ಶಾಕುಂತಳ – ಅನುವಾದ
II. ತೇಜಸ್ವಿಯವರ ಸ್ವರೂಪ – ಭಾವಾನುವಾದ
III. ಕುವೆಂಪುರವರ ರಕ್ತಾಕ್ಷಿ – ರೂಪಾಂತರ
IV. ಬೇಂದ್ರೆಯವರ ಮೇಘದೂತ – ಸ್ವತಂತ್ರ
(A) I ಮತ್ತು III (B) II ಮತ್ತು I
(C) III ಮತ್ತು II (D) IV ಮತ್ತು I

**28.** ಸರಿಯಾದ ಹೊಂದಾಣಿಕೆ ಅಲ್ಲ :
I. ವಾಚ್ಯಾರ್ಥ – ಅಭಿದಾವೃತ್ತಿ
II. ಅಸದಾಖ್ಯಾತಿ – ಕಾವ್ಯದೋಷ
III. ದೃಷ್ಟಾಂತ – ಶಬ್ದಾಲಂಕಾರ
IV. ಲಕ್ಷ್ಯಾರ್ಥ – ಲಕ್ಷಣಾವೃತ್ತಿ
(A) II ಮತ್ತು III
(B) I ಮತ್ತು IV
(C) I ಮತ್ತು III
(D) IV ಮತ್ತು II

**29.** ಇವು ಕನ್ನಡ ಭಾಷೆಯ ಆಕೃತಿಮಾಗಳು :
I. ನಿಷೇಧಾರ್ಥ ಉಪಸರ್ಗ – ನಿರ್
II. ಷಷ್ಠಿವಿಭಕ್ತಿ ಪ್ರತ್ಯಯ – ಅ
III. ತದ್ಧಿತ ಪ್ರತ್ಯಯ – ಆಳಿ
IV. ವಿರೋಧಾರ್ಥಕ ಸೂಚಕ – ಅಪ
(A) I ಮತ್ತು II
(B) II ಮತ್ತು III
(C) I ಮತ್ತು III
(D) II ಮತ್ತು IV

**30.** ಇವುಗಳಲ್ಲಿ ಪ್ರೇರಣಾರ್ಥಕ ಕ್ರಿಯಾಪದಗಳು :
I. ಮಾಡಿಸಿದನು
II. ಕೊಡಿಸಿದನು
III. ಮಾಡಿಯಾನು
IV. ಕೊಡಲಿ
(A) I ಮತ್ತು III
(B) I ಮತ್ತು II
(C) II ಮತ್ತು III
(D) IV ಮತ್ತು III

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ : ಪ್ರಶ್ನೆ 31 ರಿಂದ 35ರ ವರೆಗೆ ಉತ್ತರಿಸಿ :**

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಅಮಳಕಂಠಮೆಂಬುದು ಪೊಟಲದ ನಾಳ್ವೊಂ ಅವಿಷ್ಟಸೇನನೆಂಬೊನರಸನಾತನ ಮಹಾದೇವಿ ನಂದಿನಿಯೆಂಬೊಳಾಯಿರ್ವರ್ಗೆ ಮಗಂ ದಂಡಕನೆಂಬೊಂ ಪುಟ್ಟಿದೊನಾತಂ ಗರ್ಭದೊಳಿರ್ದಂದು ನಂದಿನಿ ಮಹಾದೇವಿಗಿಂತುಟೊಂದು ಬಯಕೆಯಾದುದೆಲ್ಲಾ ಜನಂಗಳುಮಂ ದಂಡಿಸುವಂತಿರೆಯದಱಿಂದಾತಂಗೆ ತಾಯುಂ ತಂದೆಯುಂ ದಂಡಕನೆಂದು ಪೆಸರನಿಟ್ಟೊರ್ರಾತನಿಂ ಕಿಱಿಯೊಳ್ ನಂದವತಿಯೆಂಬೊಳ್ ಕೂಸಾಕೆಯನರ್ಧಚಕ್ರವರ್ತಿಯಪ್ಪ ವಿಷ್ಣುವಿಂಗೆ ಕೊಟ್ಟು ದಂಡಕನುಂ ವಿಷ್ಣುವಿಂಗಾದಮಾನುಂ ಪ್ರಿಯನಪ್ಪ ಸೇನಾಪತಿಯಾದನಂತನಿಬರುಮಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ.

ಮತ್ತೊಂದು ದಿವಸಂ ವಿಷ್ಣು ಅರಿಷ್ಟನೇಮಿಭಟಾರರಂ ಬಂಧಿಸಲ್ಕೆಂದು ಬಲದೇವಂ ಬೆರಸು ಪುತ್ರಕಳತ್ರ ಮಿತ್ರ ಸಪರಿವಾರಂ ಪೋಗಿ ಸಮವಸರಣಮನೆಯ್ದಿ ಸ್ಫಟಿಕಮಯಮಪ್ಪ ಸೋಪಾನಪಂಕ್ತಿಗಳಿಂದೊಪ್ಪುವುದನೇಱಿ ಗಂಧಕುಟಿ ಪ್ರಾಸಾದಮಂ ತ್ರಿಃಪ್ರದಕ್ಷಿಣಂ ಗೆಯ್ದು ಬಂದಭಿಮುಖನಾಗಿರ್ದು ಸ್ತುತಿ ಶತ ಸಹಸ್ರಂಗಳಿಂ ಸ್ತುತಿಯಿಸಿ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸಿ ಗಣಧರ ದೇವರ್ ಮೊದಲಾಗೊಡೆಯ ಋಷಿ ಸಮುದಾಯಮಂ ಗುರುಪರಿವಿಡಿಯಿಂದಿಂ ವಂದಿಸಿ ತಮ್ಮಿ ರ್ಪೊವರಿಯೊಳಿರ್ದು ಧರ್ಮಮಂ ಕೇಳ್ದು ತದನಂತರಂ ವಿಷ್ಣು ವಿಂತೆಂದು ಬೆಸಗೊಂಡಂ ಭಟಾರಾ ಈ ಅತಿರೌದ್ರನಪ್ಪ ದಂಡಕಂ ನರಕಂಬುಗುವಂತಿರೆ ಪಿರಿದುಂ ಪಾಪಮಂ ನೆರಪಿದನೀತನ ಪಾಪಕರ್ಮದುಪಶಮಮನಿತು ಕಾಲದಿಂದಕ್ಕುಂ ಮತ್ತಮೀತನ ಮುನ್ನಿನ ಭವಮೇನೆಂದು ಬೆಸಗೊಂಡೊಡೆ ಸಕಲ ವಿಮಲ ಕೇವಲ ಜ್ಞಾನ ವಿರಾಜಿತನಪ್ಪ ಅರಿಷ್ಟನೇಮಿ ಭಟಾರರಿಂತೆಂದು ಪೇೞ್ದರ್.

ಈ ಜಂಬೂದ್ವೀಪದ ಪೂರ್ವವಿದೇಹದೊಳ್ ವೀತಶೋಕಮೆಂಬುದು ಪೊಟಲುಂಟು ಅದನಾಳ್ವೊನ್ ಆಶೋಕನೆಂಬೊನರಸನಾತನ ಮಹಾಸಾಮಂತಂ ಸುಧಾಮಕನೆಂಬೊಂ ತೀವ್ರಲೋಭದೊನತಿ ರೌದ್ರಮಪ್ಪಾರಂಭ ಕರ್ಮದೊಳ್ ಕೂಡಿದೊಂ ತನ್ನಾರಂಭದ ಕೆಯ್ಗಳನೊಕ್ಕು ವೆಟ್ಟುಗಳ ಬಾಯಂ ಕಟ್ಟಿಯೊಕ್ಕಿಸುಗುಂ ಮತ್ತಡುವಬಡಿಸುವ ಬೆಸಕೆಯ್ವ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ಸುಗುಂ ಮತ್ತಂ ಕೊಲೆಯುಂ ಪಿರಿದಾರಂಭಮುಂ ಪೆರ್ವರದುಮೆಂಬಿವು ಕಾರಣಮಾಗಿ ನರಕಾಯುಷ್ಯಂ ಕಟ್ಟಿ ಕಾಲಂ ಸಲೆ ಆತಂಗೆ ಶಿರೋರೋಗಮುಂ ಮುಖರೋಗಮುಮಾಗಿ ವೇದನಾಭಿಭೂತನಾಗಿರ್ಪನ್ನೆಗಂ ವೈದ್ಯರಂ ಬೆಸಗೊಂಡೊಡದರ್ಕೆ ಪ್ರತೀಕಾರಮೊಂದು ದಿವಸಂತನಗೆ ಮರ್ದುವೆರಸಿಯಟ್ಟ ಕೂಟಿನುಣಲೆಂದಿರ್ಪನ್ನೆಗಂ ಸಮಾಧಿಗುಪ್ತರೆಂಬ ಭಟಾರರ್ ಚರಿಗೆವೊಕ್ಕರವರನತಿಭಕ್ತಿಯಿಂದಂ ನಿಱಿಸಿ ತನಗುಳ್ಳ ವ್ಯಾಧಿಯವರ್ಗುಂಟೆಂಬುದನಱಿದು ತನಗೆಂದು ಮಾಡಿದ ಮರ್ದಿನ ಕೂಟನವರ್ಗೆ ಬಡ್ಡಿಸಿದೊಡವರ್ ಚರಿಗೆ ಮಾಡಿ ಪರಿಸಿ ಪೋದರ್ ಪನ್ನೆರಡು ವರುಷದ ಶರೋರೋಗಮುಂ ಮುಖರೋಗಮುಮಾ ರಿಸಯರ್ಗೆ ಕೆಟ್ಟುತ್ತಾಸುಧಾಮಕನುಂ ದಾನದ ಫಲದಿಂದಂ ಕಿಱಿದು ಪುಣ್ಯಮಂ ನೆರಪಿಕೊಂಡಂ ಮತ್ತಂಬದ್ಧಾಯುಷ್ಯನಪ್ಪುದಱಿಂ ಮೂಱನೆಯ ನರಕದೊಳೇೞಿಂ ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ

**31.** ದಂಡಕನೆಂಬ ಹೆಸರು ಬಂದಿರಲು ಕಾರಣ

(A) ತಾಯಿ ನಂದಿನಿಗೆ ಜನಗಳನ್ನು ಶಿಕ್ಷಿಸಬೇಕೆಂಬ ಬಯಕೆ ಹುಟ್ಟಿದ್ದರಿಂದ

(B) ದಂಡಾಧಿಪತಿಯಾಗುತ್ತಾನೆಂಬ ಆಶಯವು ತಾಯಿಗೆ ಆಗಿದ್ದರಿಂದ

(C) ನಂದಿನಿಯ ಅರಸ ಅವಿಷ್ಟಸೇನನು ಆಜ್ಞೆ ಮಾಡಿದ್ದುದರಿಂದ

(D) ಜನಗಳೆಲ್ಲರ ಬಯಕೆಯ ಕಾರಣದಿಂದ

**32.** ವಿಷ್ಣು ಚಕ್ರವರ್ತಿಯು ಅರಿಷ್ಟನೇಮಿಯ ಹತ್ತಿರ ಬಂದಿದ್ದು

(A) ಅರಿಷ್ಟನೇಮಿಯನ್ನು ಬಂಧಿಸಲು

(B) ಅರಿಷ್ಟನೇಮಿಯನ್ನು ನಮಸ್ಕರಿಸಿ, ಗೌರವ ಸಲ್ಲಿಸಲು

(C) ತನ್ನ ಹಿಂದಿನ ಭವವನ್ನು ತಿಳಿದುಕೊಳ್ಳಲು

(D) ಋಷಿ ಸಮುದಾಯವನ್ನು ಗುರುಗಳನ್ನಾಗಿ ಸ್ವೀಕರಿಸಲು

**33.** ಸುಧಾಮಕನು ಮಾಡಿದ ಕ್ರೂರ ಕೆಲಸಗಳು

(A) ಎತ್ತುಗಳು ಹೊಲಮೇಯದಂತೆ ಹೊಲದ ಆಚೆಗೆ ಕಟ್ಟಿ ಹಾಕಿದ್ದು

(B) ಮಕ್ಕಳು ಹಾಲು ಕುಡಿಯದಂತೆ ಗೋಳಾಡಿಸಿದ್ದು

(C) ತೀವ್ರ ಲೋಭದಿಂದ ಹಣವಿದ್ದವರನ್ನು ದಂಡಿಸಿದ್ದು

(D) ಅನೇಕ ಬಗೆಯ ಹಿಂಸೆಗಳನ್ನು ಪ್ರಾಣಿ ಪಕ್ಷಿಗಳಿಗೆ ಮಾಡಿದ್ದು

**34.** ಸುಧಾಮಕನಿಗೆ ಬಂದಂಥ ಕಾಯಿಲೆಯ ಸ್ವರೂಪ
(A) ತಲೆಯ ರೋಗ ಹಾಗೂ ಮುಖದ ರೋಗವು ಒಟ್ಟಾಗಿ ಬಂದದ್ದು
(B) ಮುಖದ ರೋಗವು ತಲೆಗೆ ವ್ಯಾಪಿಸಿ ತಲೆಯ ರೋಗ ಬಂದಿದ್ದು
(C) ವೇದನೆಯಿಂದ ತಲೆ ನೋವು ಎಲ್ಲ ಕಡೆ ವ್ಯಾಪಿಸಿದ್ದು
(D) ನರಕದ ಶಾಪದಿಂದ ತಲೆ ಶಿರಕ್ಕೆ ನೋವು ವ್ಯಾಪಿಸಿದ್ದು

**35.** ಔಷಧಿಯ ಸೇವನೆಯಿಂದ ರೋಗವು ವಾಸಿಯಾದದ್ದು
(A) ಸಮಾಧಿಗುಪ್ತನೆಂಬ ಮುನಿಗೆ
(B) ಸುಧಾಮಕನಿಗೆ
(C) ದಂಡಕನೆಂಬ ವ್ಯಕ್ತಿಗೆ
(D) ಅರಿಷ್ಟನೇಮಿಗೆ

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ.**

**36. ಹೇಳಿಕೆ** : ''ಸತ್ತ ಮಗಂದಿರ್ಸತ್ತರ್ ನೀನೆಮಗುಳ್ದೊಡೆ ಸಾಲ್ವುದವರನಿಂ ತಂದಪೆವೆ.''
**ವಿವರಣೆ** : ''ಸಾಯಬೇಕಾದ ಮಕ್ಕಳು ಸತ್ತರು, ನೀನಿದ್ದರೆ ಏನುಪಯೋಗ ?''
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**37. ಹೇಳಿಕೆ** : ''ಅರಸು ವಿಚಾರ, ಸಿರಿಯ ಶೃಂಗಾರ ಸ್ಥಿರವಲ್ಲ ಮಾನವ.''
**ವಿವರಣೆ** : ''ಅರಸನ ಬಗೆಗಿನ ಚಿಂತೆ, ಸ್ತ್ರೀಯ ಶೃಂಗಾರ ಅಸ್ಥಿರವಾದದ್ದು.''
(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**38. ಹೇಳಿಕೆ** : ''ಯತಿವಿಲಂಘನದಿಂದಮರಿದಲ್ತೆ ಕನ್ನಡಂ.''
**ವಿವರಣೆ** : ''ಕನ್ನಡದಲ್ಲಿ ಯತಿನಿಯಮವನ್ನು ಪಾಲಿಸಲೇ ಬೇಕು.''
(A) ಹೇಳಿಕೆ ತಪ್ಪು, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

**39. ಹೇಳಿಕೆ** : ''ಹೋದವನು ಹಿಂದಿರುಗಿ ಬರಲು ಹಾದಿಗಳಲ್ಲಿ ; ಅದೇ ಕಡೆಯ ಮನೆ !.''
**ವಿವರಣೆ** : ''ಕಡೆಯ ಮನೆಯಲ್ಲಿರುವವನು ಒಮ್ಮೆ ಹೋದರೆ ಹಿಂದಿರುಗುವುದಿಲ್ಲ.''
(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ಸರಿ, ವಿವರಣೆ ತಪ್ಪು

**40. ಹೇಳಿಕೆ** : ''ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ.''
**ವಿವರಣೆ** : ''ಕುಳಪ್ರಾಸದಲ್ಲಿ ಲಕಾರ ಬಂದಾಗ ಅದನ್ನು ಕ್ಷಳವನ್ನಾಗಿ ಮಾಡಿಕೊಳ್ಳಲೇಬೇಕು.''
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದೆ ?
(A) ತಿರುಮಲಾರ್ಯನ ಚಿಕ್ಕದೇವರಾಯ ವಂಶಾವಳಿ – ಗದ್ಯ
(B) ದೇಪರಾಜನ ಸೊಬಗಿನ ಸೋನೆ – ಚಂಪೂ
(C) ಮುದ್ದಣನ ಅದ್ಭುತ ರಾಮಾಯಣ – ಷಟ್ಪದಿ
(D) ಭೀಮ ಕವಿಯ ಬಸವ ಪುರಾಣ – ಸಾಂಗತ್ಯ

**42.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುವುದಿಲ್ಲ ?
(A) ನಯಸೇನ – ಹೊಯ್ಸಳ ಒಂದನೆಯ ಬಲ್ಲಾಳ
(B) ಪೊನ್ನ – ಮುಮ್ಮಡಿ ಕೃಷ್ಣ
(C) ಕೆಂಪುನಾರಾಯಣ – 3ನೇ ಕೃಷ್ಣರಾಜ
(D) ಗುರುಬಸವ – ಪ್ರೌಢ ದೇವರಾಯ

**43.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುತ್ತದೆ ?
(A) ಸಂಚಿಯ ಹೊನ್ನಮ್ಮ – ಪದ್ಮಿನಿ ಪರಿಣಯ
(B) ಕನಕದಾಸ – ಅನುಭವಸಾರ
(C) ಗೋವಿಂದ ವೈದ್ಯ – ಕುಮಾರರಾಮನ ಸಾಂಗತ್ಯ
(D) ದೇವಚಂದ್ರ – ರಾಜಾನಳ ಕಥೆ

**44.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆ ?

(A) ಚಂದ್ರಶೇಖರ ಕಂಬಾರ – ನವಿಲು ಕಿನ್ನರಿ

(B) ಚಂದ್ರಶೇಖರ ಪಾಟೀಲ – ಗಾಂಧೀ ಸ್ಮರಣೆ

(C) ಬೆಸಗರಹಳ್ಳಿ ರಾಮಣ್ಣ – ಹಕ್ಕಿಗಳಲ್ಲಿ

(D) ಕೆ. ಎಸ್. ನಿಸಾರ್ ಅಹಮದ್ – ಮಳೆಬಿದ್ದನೆಲದಲ್ಲಿ

**45.** ಕೆಳಗಿನ ಜೋಡಿಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಆಗುತ್ತದೆ ?

(A) ಕಾವ್ಯವು ಪ್ರತಿಮೆಗಳ ಪರಂಪರೆ – ಸಿ. ಡಿ. ಲೂಯಿ

(B) ಪ್ರತಿಭೆ ಒಂದು ಉತ್ತಮ ಮಟ್ಟದ ಸಾಮರ್ಥ್ಯ – ಕೋಲ್‌ರಿಜ್

(C) ಪಾತ್ರ ಸೃಷ್ಟಿಯ ಮೂಲಕ ನಿರ್ಮಿಸುವ ಪುನರ್ ಬದುಕು – ಅರಿಸ್ಟಾಟಲ್

(D) ತನ್ನ ಭಾವವನ್ನು ಓದುಗನ ಮನಸ್ಸಿಗೆ ಸಂವಹನಗೊಳಿಸುವ ಮಾಧ್ಯಮವೇ ವಸ್ತು ಪ್ರತಿರೂಪ – ಕ್ರೋಚೆ

**46.** ಬಹು ಆಯ್ಕೆಯ ಜೋಡಣೆ :

| | |
|---|---|
| a. ಸಂಕ್ರಾಂತಿ | 1. ಕಾದಂಬರಿ |
| b. 'ಕರತಲ ರಂಗಭೂಮಿ' | 2. ನಾಟಕ |
| c. ಪಂಚಕಜ್ಜಾಯ | 3. ಸಂಶೋಧನೆ |
| d. ಸಮಾಲೋಕನ | 4. ವಿಮರ್ಶೆ |
| | 5. ಕಥಾಸಂಕಲನ |

**ಇವುಗಳಿಗೆ ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | 3 | 2 | 1 | 4 |
| (B) | 3 | 1 | 5 | 2 |
| (C) | 2 | 1 | 3 | 4 |
| (D) | 2 | 3 | 1 | 4 |

**47.** ಬಹು ಆಯ್ಕೆಯ ಜೋಡಣೆ :

| | |
|---|---|
| a. ವಿರೇಚನ | 1. ಸಿ. ಡಿ. ಲೂಯಿ |
| b. ಕಾವ್ಯ ಪ್ರತಿಮೆ | 2. ಮ್ಯಾಥ್ಯೂ ಆರ್ನಾಲ್ಡ್ |
| c. ಕಾವ್ಯ ಪ್ರತಿಭೆ | 3. ಪ್ಲೇಟೋ |
| d. ಅನುಕರಣೆ | 4. ಅರಿಸ್ಟಾಟಲ್ |
| | 5. ಕೋಲ್‌ರಿಜ್ |

**ಇವುಗಳಿಗೆ ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | 3 | 1 | 4 | 5 |
| (B) | 4 | 1 | 5 | 3 |
| (C) | 2 | 3 | 4 | 5 |
| (D) | 1 | 4 | 2 | 5 |

**ಇವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆ ಗುರುತಿಸಿ :**

**48.** (A) ಯೋಗಾಂಗ ತ್ರಿವಿಧಿ, ಬಸವ ಪುರಾಣ, ಭಾವಚಿಂತಾರತ್ನ, ಭರತೇಶ ವೈಭವ

(B) ಬಸವ ಪುರಾಣ, ಭರತೇಶ ವೈಭವ, ಯೋಗಾಂಗ ತ್ರಿವಿಧಿ, ಭಾವಚಿಂತಾರತ್ನ

(C) ಭರತೇಶ ವೈಭವ, ಬಸವ ಪುರಾಣ, ಯೋಗಾಂಗ ತ್ರಿವಿಧಿ, ಭಾವಚಿಂತಾರತ್ನ

(D) ಭಾವಚಿಂತಾರತ್ನ, ಯೋಗಾಂಗ ತ್ರಿವಿಧಿ, ಭರತೇಶ ವೈಭವ, ಬಸವ ಪುರಾಣ

**49.** (A) ದುರ್ಗಸಿಂಹ, ಜನ್ನ, ರುದ್ರಭಟ್ಟ, ಕೇಶಿರಾಜ

(B) ದುರ್ಗಸಿಂಹ, ರುದ್ರಭಟ್ಟ, ಜನ್ನ, ಕೇಶಿರಾಜ

(C) ಜನ್ನ, ರುದ್ರಭಟ್ಟ, ಕೇಶಿರಾಜ, ದುರ್ಗಸಿಂಹ

(D) ರುದ್ರಭಟ್ಟ, ಕೇಶಿರಾಜ, ದುರ್ಗಸಿಂಹ, ಜನ್ನ

**50.** (A) ಸಿದ್ಧರಾಮ, ಗುಮ್ಮಳಾಪುರದ ಸಿದ್ಧಲಿಂಗಯತಿ, ಸಿಂಗರಾರ್ಯ, ದೇವಚಂದ್ರ

(B) ಸಿದ್ಧರಾಮ, ಗುಮ್ಮಳಾಪುರದ ಸಿದ್ಧಲಿಂಗಯತಿ, ದೇವಚಂದ್ರ, ಸಿಂಗರಾರ್ಯ

(C) ಗುಮ್ಮಳಾಪುರದ ಸಿದ್ಧಲಿಂಗಯತಿ, ಸಿದ್ಧರಾಮ, ದೇವಚಂದ್ರ, ಸಿಂಗರಾರ್ಯ

(D) ಸಿದ್ಧರಾಮ, ದೇವಚಂದ್ರ, ಸಿಂಗರಾರ್ಯ, ಗುಮ್ಮಳಾಪುರದ ಸಿದ್ಧಲಿಂಗಯತಿ

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**